ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ**

# ಸಿ. ಸಿ. ನಂ. 1675/2022

ಪಿರ್ಯಾದಿಃ ಶ್ರೀ ನಡಿಕೇರಿಯಂಡ ಪಿ. ಕರುಂಬಯ್ಯ, ತಂದೇಃಪೌತಿ ಎನ್ ಪೊನ್ನಪ್ಪ, 59 ವರ್ಷ,
ವಾಸಃ ಚಿಕ್ಕಪೇಟೆ, ವಿರಾಜಪೇಟೆ ಪಟ್ಟಣ,
ವಿರಾಜಪೇಟೆ ದ.ಕೊಡಗು –571 218.

(ಶ್ರೀ ಕೆ.ಎನ್. ವಿಶ್ವನಾಥ್, ವಕೀಲರು,ವಿರಾಜಪೇಟೆ.)

***ವಿರುದ್ಧ***

ಆರೋಪಿಃ ಶ್ರೀ ತಾತಂಡ ಪಿ. ಗಣಪತಿ,ತಂದೇಃಪೌತಿ ಟಿ.ಕೆ ಪೂವಯ್ಯ, 58 ವರ್ಷ,
ವಾಸಃ ಕುಕ್ಲೂರು ಗ್ರಾಮ, ಚೆಂಬೆಬೆಳ್ಳೂರು ಅಂಚೆ,
ವಿರಾಜಪೇಟೆ ದ.ಕೊಡಗು – 571 218.
(ಶ್ರೀ ಬಿ.ಎನ್ ಜಗದೀಶ್, ವಕೀಲರು, ವಿರಾಜಪೇಟೆ)

**::ಆಪಾದನೆಯ ಸಾರಾಂಶ::**

ಪಿರ್ಯಾದಿಯಿಂದ ಆರೋಪಿಯಾದ ನೀವು ವ್ಯಾಪಾರದ ಸಲುವಾಗಿ ರೂ.15,00,000/–ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಅದನ್ನು ಮರು ಪಾವತಿಸುವ ಸಲುವಾಗಿ ಆರೋಪಿಯಾದ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿರಾಜಪೇಟೆ ಶಾಖೆಯ ತಮ್ಮ ಖಾತೆಗೆ ಸಂಬಂಧಿಸಿದ ಎರಡು ಚೆಕ್ಕುಗಳನ್ನು ದಿನಾಂಕ 06.07.2022 ಚೆಕ್ ಸಂಖ್ಯೆ 013624 ನ್ನು ರೂ. 5,00,000/– ಮತ್ತು ಚೆಕ್ ಸಂಖ್ಯೆ 106989 ನ್ನು ರೂ. 10,00,000/– ಕ್ಕೆ ದಿನಾಂಕ 06.07.2022 ರ ದಿನಾಂಕವನ್ನು ನಮೂದಿಸಿ ಪಿರ್ಯಾದಿಗೆ ನೀಡಿದ್ದು, ಅವುಗಳ ಪೈಕಿ ಚೆಕ್ ಸಂಖ್ಯೆ 013624 ರ ರೂ. 5,00,000/–ವನ್ನು ಪಿರ್ಯಾದಿಯವರು ಸದರಿ ಚೆಕ್‌ನ್ನು ನಗಧೀಕರಿಸುವ ಸಲುವಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ವಿರಾಜಪೇಟೆ ಶಾಖೆಯ ಮೂಲಕ ಸಲ್ಲಿಸಿದಾಗ, ಸದರಿ ಚೆಕ್ "**Funds Insufficient**" ಎಂಬ ಕಾರಣ ನಮೂದಿಸಿ ದಿನಾಂಕಃ 08.07.2022 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿಸಿರುತ್ತಾರೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ

ವಕೀಲರಿಂದ ದಿನಾಂಕಃ 16.07.2022 ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್‌ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಮೇಲಿನ ಆಪಾದನೆಯ ಸಾರಾಂಶವನ್ನು ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿಃ
(ಸಂತೋಷ ಕೊಠಾರಿ )

ದಿನಾಂಕಃ 28.01.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,
ವಿರಾಜಪೇಟೆ.